ದಿನಾಂಕಃ **12-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-

ಶಿವರಾಜಚಾರಿ ಬಿನ್ ಶಾಮಾಚಾರಿ ಎಂದರೆ ನನ್ನ ಚಿಕ್ಕಪ್ಪ. ರತ್ನಮ್ಮ ಕೋಂ ಸಣ್ಣಚಾರಿ ಎಂದರೆ ನನ್ನ ಅತ್ತೆ. ನಾಗೇಂದ್ರಚಾರಿ ರವರ ಹೆಂಡತಿ ರತ್ನಮ್ಮ ನನ್ನ ದೊಡ್ಡಮ್ಮ. ಯಮುನಾಚಾರಿ ಮತ್ತು ಭಾಗ್ಯ ನನ್ನ ದೊಡ್ಡಪ್ಪನ ಮಕ್ಕಳು. ಹೇಮಾವತಿ ಕೋಂ ವಿಜಯಚಾರಿ ನನ್ನ ಅಕ್ಕ. ಮೀನಾಕ್ಷಮ್ಮ ಕೋಂ ವಿರೂಪಾಕ್ಷಾಚಾರಿ ನನ್ನ ತಂಗಿ. ಇಂದಿರಮ್ಮ ಕೋಂ ನಿಂಗಾಚಾರಿ ನನ್ನ ಅತ್ತೆ. ಗಣೇಶಚಾರಿ ಬಿನ್ ಬಸಪ್ಪ ನನ್ನ ತಂದೆ. ಶಾಮಾಚಾರಿ ಮತ್ತು ವೀರಾಚಾರಿ ನನ್ನ ಚಿಕ್ಕಪ್ಪಂದಿರು. ಹಾಲೇಶಚಾರಿ ಬಿನ್ ಶಾಮಾಚಾರಿ ನನ್ನ ತಮ್ಮ. ಆಶಾ ತಂದೆ ಶಾಮಾಚಾರಿ ನನ್ನ ತಂಗಿ. ಮೇಲ್ಕಂಡರವರ ಮೇಲೆ ಶಿವರಾಜಚಾರಿ ಬಿನ್ ಶಾಮಾಚಾರಿರವರು ಭಾಗಂಶವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಬಗ್ಗೆ ನನ್ನ ತಂದೆಯ ಮುಖಾಂತರ ನಾನು ತಿಳಿದುಕೊಂಡಿರುವುದಿಲ್ಲ. ಶಿವರಾಜಚಾರಿ ಬಿನ್ ಶಾಮಾಚಾರಿರವರು ಮೇಲ್ಕಂಡರವರ ಮೇಲೆ ಭಾಗಾಂಶ ಕೋರಿ ದಾವೆಯನ್ನು ಶ್ರೀನಾಥ್ ವಕೀಲರ ಮೂಲಕ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಪ್ರತಿವಾದಿ ಸದರಿ ಭಾಗಾಂಶದ ದಾವೆಯಲ್ಲಿ 13 ನೇ ಪ್ರತಿವಾದಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ವಕೀಲರ ಮೂಲಕ ಸದರಿ ಭಾಗಾಂಶದ ದಾವೆಯ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸಾಕ್ಷಿಗೆ ದಿಃ 31-01-2015 ರಂದು ಸದರಿ ಭಾಗಾಂಶದ ದಾವೆಯು ವಜಾಗೊಂಡಿರುವ ಬಗ್ಗೆ ನಿಮ್ಮ ವಕೀಲರ ಮೂಲಕ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ವೀರಾಚಾರಿ ಮತ್ತು ಶಿವರಾಜಚಾರಿ ರವರು ಅಸಲು ದಾವಾ

ಸಂಖ್ಯೆ 138/2009 ರಲ್ಲಿ ಆದಂತಹ ಆದೇಶವನ್ನು ಪ್ರಶ್ನಿಸಿ ಆರ್ ಎ ನಂ.64/2017 ರ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರ್ ಎ ನಂ.64/2017 ರಲ್ಲಿ ನಾನು ನ್ಯಾಯಾಲಯದಲ್ಲಿ ಹಾಜರಾಗಿರುವುದಿಲ್ಲ. ದಿಃ 13-03-2024 ರಂದು ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2018 ನೇ ಸಾಲಿನಲ್ಲಿ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೆನು. ಪ್ರತಿವಾದಿಯನ್ನು ದಾವಾ ಆಸ್ತಿಯನ್ನು ನನಗೆ ವಾಪಾಸ್ಸು ಮಾಡಿಕೊಡುವಂತೆ ಯಾವ ದಿನಾಂಕದಂದು ಕೇಳಿದ್ದೆ ಎಂದು ನನಗೆ ನಿರ್ದಿಷ್ಟವಾಗಿ ನೆನಪಿಲ್ಲ. ದಾವಾ ಆಸ್ತಿಯ ಚಕ್ಕುಬಂಧ ಪೂರ್ವಕ್ಕೆ ಬೆನಕಪ್ಪರವರ ಜಮೀನು, ಪಶ್ಚಿಮಕ್ಕೆ ಶಾಲೆ, ಉತ್ತರಕ್ಕೆ ಜಾಣಪ್ಪರವರ ಜಮೀನು, ದಕ್ಷಿಣಕ್ಕೆ ಶಂಕ್ರಮ್ಮರವರ ಜಮೀನು. ಈ ದಾವೆಯನ್ನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸಲ್ಲಿಸಲು ನನಗೆ ಯಾರು ಹೇಳಿರುವುದಿಲ್ಲ ನಾನೇ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಪ್ರತಿವಾದಿಗೆ ಮಾರಾಟವಾಗಿರುವ ವಿಚಾರ 2018 ನೇ ಸಾಲಿನಲ್ಲಿ ನನಗೆ ತಿಳಿಯಿತು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸಲ್ಲಿಸಿದ ದಾವೆಯು ಡಿಕ್ರಿ ಆದ ನಂತರ ನನಗೆ ತಿಳಿದಿರುತ್ತದೆ. ನಿಪಿ-1 ಕ್ರಯ ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪಹಣಿ, ಇ ಸಿ, ಮುಟೇಷನ್ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನನ್ನ ಚಿಕ್ಕಪ್ಪ ವೀರಾಚಾರಿ ಅಂಚೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಮ್ಮ ಅಜ್ಜ ಖರೀದಿ ಮಾಡಿದ ಆಸ್ತಿಯಾಗಿರುತ್ತದೆ. ನನ್ನ ತಂದೆ, ನನ್ನ ತಂದೆಯ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಒಪ್ಪಿಗೆ ಮತ್ತು ಸಮ್ಮತಿಯ ಮೇರೆಗೆ ಪ್ರತಿವಾದಿಗೆ ದಾವಾ ಆಸ್ತಿಯನ್ನು ನಿಪಿ-1 ರ ಪ್ರಕಾರ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಿಪಿ-1 ಕ್ರಯ ಪತ್ರವನ್ನು ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಸೋದರ ಅತ್ತೆಯವರು ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ಮೇಲೆ ಭಾಗಾಂಶದ ದಾವೆಯನ್ನು ಸಲ್ಲಿಸಿ ಅಂತಿಮ ಡಿಕ್ರಿಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿ. ಅಸಲು ದಾವೆಯಲ್ಲಿ ಆದಂತಹ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ ಮೇಲ್ಮನವಿಯು ಸಹ ವಜಾಗೊಂಡಿರುತ್ತದೆ ಎಂದರೆ ಸರಿ.

ಅಸಲು ದಾವೆಯಲ್ಲಿ ಆದಂತಹ ಆದೇಶವನ್ನು ಅಂತಿಮ ಡಿಕ್ರಿಯಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.